# ಕರ್ನಾಟಕ ಸರ್ಕಾರ

## ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ
## ಬೆಂಗಳೂರು

# 2019–20 ನೇ ಸಾಲಿನ
# ವಾರ್ಷಿಕ ವರದಿ

# ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಗೆ ಸಂಬಂಧಿಸಿದ 2019-20 ರ ಸಾಲಿನ ವಾರ್ಷಿಕ ವರದಿ.

**1) ಮುಖ್ಯ ಧ್ಯೇಯಗಳು ಮತ್ತು ಜವಾಬ್ದಾರಿಗಳು:-**

ಸರ್ಕಾರದ ಆದೇಶ ಸಂಖ್ಯೆ: ಲಾ 84 ಪಿಪಿಇ 75 ದಿನಾಂಕ: 01.12.1975 ರ ಅನ್ವಯ ಈ ರಾಜ್ಯದಲ್ಲಿ ಕ್ರಿಮಿನಲ್ ಮೊಕದ್ದಮೆಗಳನ್ನು ಪರಿಣಾಮಕಾರಿಯಾಗಿ ನ್ಯಾಯಾಲಯಗಳಲ್ಲಿ ನಡೆಸಲು ಪ್ರತ್ಯೇಕವಾದ ಮತ್ತು ಸ್ವತಂತ್ರವಾದ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯನ್ನು ಅಸ್ತಿತ್ವಕ್ಕೆ ತರಲಾಗಿದೆ.

ಇದಲ್ಲದೆ, ಸರ್ಕಾರಿ ವ್ಯಾಜ್ಯಗಳಿಗೆ ಸಂಬಂಧಪಟ್ಟಂತೆ ರಾಜ್ಯದ ಸಿವಿಲ್ ಜಡ್ಜ್ ನ್ಯಾಯಾಲಯಗಳು ಮತ್ತು ಸಿವಿಲ್ ಜಡ್ಜ್ (ಕಿರಿಯ ಶ್ರೇಣಿ) ಮತ್ತು ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಫಸ್ಟ್ ಕ್ಲಾಸ್ ನ್ಯಾಯಾಲಯಗಳಲ್ಲಿ ನಡೆಸಲಾಗುವ ಸಿವಿಲ್ ವ್ಯಾಜ್ಯಗಳ ಮೇಲ್ವಿಚಾರಣೆಯೂ ಕೂಡ ಈ ಇಲಾಖೆಯ ಕಾರ್ಯವ್ಯಾಪ್ತಿಗೊಳಪಟ್ಟಿರುತ್ತದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಸಿಎ 07 ಎಆರ್ ಬಿ 2004 ದಿ: 23/9/2004ರ ಪ್ರಕಾರ ಈ ಇಲಾಖೆಯನ್ನು ಒಳಾಡಳಿತ ಇಲಾಖೆಯ ಕಾರ್ಯವ್ಯಾಪ್ತಿಗೆ ಒಳಪಡಿಸಲಾಗಿರುತ್ತದೆ.

**2) ಮುಖ್ಯ ಕರ್ತವ್ಯಗಳು:-**

ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯು ಪ್ರಮುಖವಾಗಿ ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುತ್ತಿದೆ :-

1. ಕ್ರಿಮಿನಲ್ ನ್ಯಾಯಾಲಯಗಳು ಮತ್ತು ಸತ್ರ ನ್ಯಾಯಾಲಯಗಳಲ್ಲಿ ಕ್ರಿಮಿನಲ್ ಮೊಕದ್ದಮೆಗಳಲ್ಲಿ ರಾಜ್ಯದ ಪರವಾಗಿ ಅಭಿಯೋಜನೆಯನ್ನು ನಡೆಸುವ ವ್ಯವಸ್ಥೆ ಮಾಡುವುದು.
2. ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯಗಳ ಹಾಗೂ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಗಳು ನೀಡಿದ ತೀರ್ಪುಗಳು ಮತ್ತು ಆದೇಶಗಳನ್ನು ಪರಿಶೀಲಿಸುವುದು ಮತ್ತು ಅಂತಹ ತೀರ್ಪುಗಳು ಮತ್ತು ಆದೇಶಗಳ ವಿರುದ್ಧ ಅರ್ಹವಾದ ಮೊಕದ್ದಮೆಗಳಲ್ಲಿ ಮೇಲ್ಮನವಿ ಸಲ್ಲಿಸಲು ಅಥವಾ ಪರಿಷ್ಕರಣಕ್ಕೆ ಅರ್ಜಿ ಸಲ್ಲಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.
3. ಅಭಿಯೋಗದಿಂದ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳುವ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಬಂದ ಪ್ರಸ್ತಾವನೆಗಳಿಗೆ ಅಭಿಪ್ರಾಯವನ್ನು ನೀಡುವುದು.
4. ಸಿವಿಲ್ ಜಡ್ಜ್ (ಕಿರಿಯ ಶ್ರೇಣಿ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ಸಂಯುಕ್ತ ನ್ಯಾಯಾಲಯಗಳಿರುವ ತಾಲ್ಲೂಕಿನ ಕೇಂದ್ರಗಳಲ್ಲಿ ರಾಜ್ಯ ಸರ್ಕಾರದ ಪರವಾಗಿ ಸಿವಿಲ್ ವ್ಯಾಜ್ಯಗಳನ್ನು ನಡೆಸುವುದು.

5. ಸಿವಿಲ್ ಜಡ್ಜ್ (ಕಿರಿಯ ಶ್ರೇಣಿ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಸಿವಿಲ್ ವ್ಯಾಜ್ಯಗಳಲ್ಲಿ ನೀಡಿದ ತೀರ್ಪು ಮತ್ತು ಆದೇಶಗಳನ್ನು ಪರಿಶಿಲಿಸಿ ಅರ್ಹವಾದ ಮೊಕದ್ದಮೆಗಳಲ್ಲಿ ಮೇಲ್ಮನವಿ ಸಲ್ಲಿಸಲು ಅಥವಾ ಪರಿಷ್ಕರಣಕ್ಕೆ ಅರ್ಜಿ ಸಲ್ಲಿಸುವ ವ್ಯವಸ್ಥೆ ಮಾಡುವುದು.

**3) ಸಂಘಟನೆ:-**

ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಗೆ ನಿರ್ದೇಶಕರು ಇಲಾಖೆಯ ಮುಖ್ಯಸ್ಥರಾಗಿರುತ್ತಾರೆ. 03 ಅಭಿಯೋಗ ಉಪ ನಿರ್ದೇಶಕರುಗಳು, 02 ಕಾನೂನು ಅಧಿಕಾರಿ [ಹಿರಿಯ], 06 ಕಾನೂನು ಅಧಿಕಾರಿಗಳು [ಕಿರಿಯ], ಒಬ್ಬರು ಕೇಂದ್ರ ಸಹಾಯಕರು, 02 ಆಡಳಿತಾಧಿಕಾರಿಗಳು, 1 ಲೆಕ್ಕ ಪರಿಶೋಧನಾಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು ಅವರಿಗೆ ಸಹಾಯಕರಾಗಿರುತ್ತಾರೆ.

ಬೆಂಗಳೂರು ನಗರ, ಬೆಂಗಳೂರು ವಿಭಾಗ, ಮೈಸೂರು, ದಾವಣಗೆರೆ, ಮಂಗಳೂರು, ಬೆಳಗಾವಿ ಹಾಗೂ ಕಲಬುರಗಿ ಗಳಲ್ಲಿ ಒಟ್ಟು 7 ವಿಭಾಗೀಯ ಕಛೇರಿಗಳು ಇದ್ದು, ಕಾನೂನು ಅಧಿಕಾರಿ [ಹಿರಿಯ] ಇವರು ವಲಯ ಮಟ್ಟದ ಮುಖ್ಯಸ್ಥರಾಗಿದ್ದು, ಕಾನೂನು ಅಧಿಕಾರಿ [ಕಿರಿಯ], ಆಡಳಿತಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರ ಸಹಕಾರದೊಂದಿಗೆ ಕಾರ್ಯನಿರ್ವಯಿಸುತ್ತಿರುತ್ತಾರೆ.

ಜಿಲ್ಲಾ ಮಟ್ಟದಲ್ಲಿ ಸರ್ಕಾರಿ ಅಭಿಯೋಜಕರುಗಳು ಸತ್ರ ನ್ಯಾಯಾಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರುಗಳು ಬೆಂಗಳೂರು ನಗರದಲ್ಲಿ ಸಿ.ಎಂ.ಎಂ. ಮತ್ತು ಜಿಲ್ಲಾ ಮಟ್ಟದಲ್ಲಿ ಸಿ.ಜೆ.ಎಂ.ನ್ಯಾಯಾಲಯಗಳಲ್ಲಿ ಹಾಗೂ ಕಡೂರು ಸಿಜೆಎಂ ನ್ಯಾಯಾಲಯದಲ್ಲಿ ಸರ್ಕಾರದ ಪರವಾಗಿ ಕ್ರಿಮಿನಲ್ ಪ್ರಕರಣಗಳನ್ನು ಪ್ರತಿನಿಧಿಸುತ್ತಿರುತ್ತಾರೆ.

ಜಿಲ್ಲಾ ಮಟ್ಟದ ಆರಕ್ಷಕ ಕಛೇರಿಗಳಲ್ಲಿ ಕಾನೂನು ಅಧಿಕಾರಿ[ಕಿರಿಯ] ಇವರು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಅದೇ ರೀತಿ ಪೊಲೀಸ್ ಆಯುಕ್ತರ ಕಛೇರಿ ಬೆಂಗಳೂರು ನಗರ, ಮೈಸೂರು ಮತ್ತು ಹುಬ್ಬಳ್ಳಿ ಇಲ್ಲಿ ಕಾನೂನು ಅಧಿಕಾರಿಗಳು [ಕಿರಿಯ] ಇವರು ಕಾರ್ಯ ನಿರ್ವಹಿಸುತ್ತಿರುತ್ತಾರೆ.

ಜಿಲ್ಲಾ ಮಟ್ಟದಲ್ಲಿ 30 ಪೋಕ್ಸೋ ನ್ಯಾಯಾಲಯಗಳು ಹಾಗೂ ಚಿಂತಾಮಣಿಯಲ್ಲಿ 1 ಪೋಕ್ಸೋ ನ್ಯಾಯಾಲಯ ಸೃಜನೆಯಾಗಿದ್ದು ಸದರಿ ನ್ಯಾಯಾಲಯಗಳಿಗೆ[ಬೆಂಗಳೂರು ನಗರವನ್ನು ಹೊರತುಪಡಿಸಿ, ವಿಶೇಷ ಸರ್ಕಾರಿ ಅಭಿಯೋಜಕರುಗಳನ್ನು ಗುತ್ತಿಗೆ ಆಧಾರದ ಮೇಲೆ ಸರ್ಕಾರವು ನೇಮಕ ಮಾಡಿರುತ್ತದೆ ಹಾಗೂ ಬೆಂಗಳೂರು ನಗರಕ್ಕೆ ಸಂಬಂಧಿಸಿದಂತೆ 1 ನ್ಯಾಯಾಲಯವು ವಿಶೇಷ ನ್ಯಾಯಾಲಯವಾಗಿದ್ದು, ಸದರಿ ನ್ಯಾಯಾಲಯಕ್ಕೆ ಸಂಬಂಧಿಸಿದಂತೆ ಇಲಾಖೆಯ ಸರ್ಕಾರಿ ಅಭಿಯೋಜಕರು, ವಿಶೇಷ ಸರ್ಕಾರಿ ಅಭಿಯೋಜಕರಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ ಅಲ್ಲದೇ, ಬೆಂಗಳೂರು ನಗರದಲ್ಲಿರುವ ವಿಶೇಷ ನ್ಯಾಯಾಲಯದ ಪ್ರಕರಣಗಳನ್ನು ಮರುಹಂಚಿಕೆ ಮಾಡಿ ಕಾರ್ಯ ಹೊಂದಾಣಿಕೆ ಮೇರೆಗೆ ಇನ್ನುಳಿದ 2 ನ್ಯಾಯಾಲಯಗಳಲ್ಲಿ ಸಹ ಪೋಕ್ಸೋ ಪ್ರಕರಣಗಳು ನಡೆಯುತ್ತಿರುತ್ತದೆ.

ತಾಲ್ಲೂಕು ಮಟ್ಟದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರುಗಳು ಸಿವಿಲ್ ಜಡ್ಜ್ [ಕಿ.ವಿ.] / [ಹಿ.ವಿ.] ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯಗಳಲ್ಲಿ ಕ್ರಿಮಿನಲ್ ಹಾಗೂ ಸಿವಿಲ್ ಪ್ರಕರಣಗಳನ್ನು ಸರ್ಕಾರದ ಪರವಾಗಿ ಪ್ರತಿನಿಧಿಸುತ್ತಿರುತ್ತಾರೆ.

ಸರ್ಕಾರಿ ಅಭಿಯೋಜಕರು : ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು : ಸಹಾಯಕ ಸರ್ಕಾರಿ ಅಭಿಯೋಜಕರುಗಳ ಕಛೇರಿಗಳಿಗೆ ಪೂರಕ ಸಿಬ್ಬಂದಿ ವ್ಯವಸ್ಥೆ ಮಾಡಲಾಗಿರುತ್ತದೆ.

**4) ವೃಂದಬಲಃ**

ದಿನಾಂಕ: 31.12.2019ರಲ್ಲಿ ಇದ್ದಂತೆ ಈ ಇಲಾಖೆಯಲ್ಲಿ ಮಂಜೂರಾದ ಹುದ್ದೆಗಳು, ಭರ್ತಿಯಾದ ಹುದ್ದೆಗಳು ಮತ್ತು ಖಾಲಿ ಇರುವ ಹುದ್ದೆಗಳು ಹಾಗೂ ಭರ್ತಿಯಾದ ಹುದ್ದೆಗಳಲ್ಲಿ ಎಸ್ ಸಿ ಮತ್ತು ಎಸ್.ಟಿ. ಹುದ್ದೆಗಳ ವಿವರಗಳ ಮಾಹಿತಿ ಈ ಕೆಳಗಿನಂತಿರುತ್ತದೆ.

| ಕ್ರಮ ಸಂಖ್ಯೆ | ಹುದ್ದೆಯ ವಿವರ | ಮಂಜೂರಾದ ಹುದ್ದೆಗಳ ಸಂಖ್ಯೆ | ಭರ್ತಿಯಾದ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ | ಎಸ್.ಸಿ. | ಎಸ್.ಟಿ. |
|---|---|---|---|---|---|---|
| (01) | (02) | (03) | (04) | (05) | (06) | (07) |
| 1. | ನಿರ್ದೇಶಕರು | 01 | - | 01 | - | - |
| 2. | ಅಭಿಯೋಗ ಉಪ ನಿರ್ದೇಶಕರು, | 03 | - | 03 | - | - |
| | ಅಭಿಯೋಗ ಉಪ ನಿರ್ದೇಶಕರು (ನಿಯೋಜನೆ) | 02 | - | 02 | - | - |
| 3. | ಸ.ಅ/ಕಾ.ಅ.[ಹಿ] | 187 | 113 | 74 | 26 | 05 |
| | ಸ.ಅ/ಕಾ.ಅ.[ಹಿ] [ನಿಯೋಜನೆ ಹುದ್ದೆಗಳು] ಹುದ್ದೆಗಳು) | 27 | 15 | 12 | 03 | 01 |
| 4. | ಹಿ.ಸ.ಸ.ಅ/ಕಾ.ಅ.[ಕಿ] | 123 | 103 | 20 | 23 | 04 |
| | ಹಿ.ಸ.ಸ.ಅ/ಕಾ.ಅ.[ಕಿ] [ನಿಯೋಜನೆ ಹುದ್ದೆಗಳು] | 19 | 12 | 07 | - | - |
| 5. | ಕೇಂದ್ರಸ್ಥಾನಿಕ ಸಹಾಯಕರು | 01 | - | 01 | - | - |
| 6. | ಸ.ಸ.ಅ-ವ-ಸ.ಸ.ವ. | 411 | 206 | 205 | 29 | 09 |
| 7. | ಲೆಕ್ಕ ಪರಿಶೋಧನಾಧಿಕಾರಿ [ನಿಯೋಜನೆ ಹುದ್ದೆ] | 01 | - | 01 | - | - |
| 8. | ಲೆಕ್ಕಪತ್ರ ಅಧೀಕ್ಷಕರು [ನಿಯೋಜನೆ ಹುದ್ದೆ] | 01 | - | 01 | - | - |
| 9. | ಆಡಳಿತಾಧಿಕಾರಿಗಳು | 10 | 04 | 06 | 01 | 01 |
| 10. | ಅಧೀಕ್ಷಕರು | 39 | 14 | 25 | 08 | 04 |
| 11. | ಪ್ರ.ದ.ಸ. | 144 | 78 | 66 | 19 | 04 |
| 12. | ಸ.ಗ್ರಂಥಪಾಲಕರು | 01 | - | 01 | - | - |

| | | | | | | |
|---|---|---|---|---|---|---|
| 13. | ಶೀಘ್ರಲಿಪಿಗಾರರು | 331 | 66 | 265 | 15 | 03 |
| 14. | ಹಿ.ಬೆರಳಚ್ಚುಗಾರರು | 37 | 05 | 32 | | |
| 15. | ದ್ವಿ.ದ.ಸ. | 65 | 29 | 36 | 06 | 02 |
| 16. | ಬೆರಳಚ್ಚುಗಾರರು | 310 | 80 | 230 | 18 | 08 |
| 17. | ವಾಹನ ಚಾಲಕರು | 09 | 02 | 07 | 01 | - |
| 18. | ಅಟೆಂಡರ್ | 54 | 34 | 20 | 06 | - |
| 19. | ದಲಾಯತರು | 420 | 22 | 398 | 03 | 01 |
| | ಒಟ್ಟು ಹುದ್ದೆಗಳು | 2196 | 783 | 1413 | 152 | 42 |

**5) ಕ್ರಿಮಿನಲ್ ಪ್ರಕರಣಗಳ ತೀರ್ಪು ಮತ್ತು ಆದೇಶಗಳ ಪರಿಶೀಲನೆ ಬಗ್ಗೆ ವಿವರಗಳು:-**

ದಿನಾಂಕ:01.01.2019 ರಿಂದ ದಿನಾಂಕ: 31.12.2019ರ ಅವಧಿಯಲ್ಲಿ ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ವಿಲೇವಾರಿಯಾದ ಕ್ರಿಮಿನಲ್ ಪ್ರಕರಣಗಳ ಮಾಹಿತಿ ಹಾಗೂ ಈ ಕಛೇರಿಯಲ್ಲಿ ನ್ಯಾಯಾಲಯದ ತೀರ್ಪುಗಳು ಮತ್ತು ಆದೇಶಗಳನ್ನು ಪರಿಶೀಲಿಸಿ, ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಲು ಅಥವಾ ಪರಿಷ್ಕರಣೆಗೆ ಅರ್ಜಿಯನ್ನು ಸಲ್ಲಿಸಲು ಶಿಫಾರಸ್ಸು ಮಾಡಲಾದ ಕ್ರಿಮಿನಲ್ ಪ್ರಕರಣಗಳ ಅಂಕಿ ಅಂಶಗಳು ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| 1. | ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ವಿಲೇವಾರಿಯಾದ ಕ್ರಿಮಿನಲ್ ಪ್ರಕರಣಗಳ ಒಟ್ಟು ಸಂಖ್ಯೆ | 139706 |
| 2. | ವಿಲೇವಾರಿಯಾದ ಕ್ರಿಮಿನಲ್ ಪ್ರಕರಣಗಳಲ್ಲಿ ಆರೋಪಿತರಿಗೆ ಶಿಕ್ಷೆ ವಿಧಿಸಲಾದ ಪ್ರಕರಣಗಳ ಒಟ್ಟು ಸಂಖ್ಯೆ | 30955 |
| 3. | ಬಿಡುಗಡೆಯಲ್ಲಿ ವಿಲೇವಾರಿಯಾದ ಕ್ರಿಮಿನಲ್ ಪ್ರಕರಣಗಳ ಸಂಖ್ಯೆ | 50208 |
| 4. | ಇತರೆ ರೀತಿಯಲ್ಲಿ ವಿಲೇವಾರಿಯಾದ ಕ್ರಿಮಿನಲ್ ಪ್ರಕರಣಗಳ ಸಂಖ್ಯೆ | 58543 |
| 5. | ದಿನಾಂಕ: 01.01.2019 ರಿಂದ 31.12.2019ರ ಅವಧಿಯಲ್ಲಿ ಈ ಕಛೇರಿಯಲ್ಲಿ ಪರಿಶೀಲಿಸಲಾದ ಕ್ರಿಮಿನಲ್ ಪ್ರಕರಣಗಳ ಒಟ್ಟು ಸಂಖ್ಯೆ | 22713 |
| 6. | ನ್ಯಾಯಾಲಯಗಳ ತೀರ್ಪು ಮತ್ತು ಆದೇಶದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಲು ಶಿಫಾರಸ್ಸು ಮಾಡಿದ ಕ್ರಿಮಿನಲ್ ಪ್ರಕರಣಗಳ ಒಟ್ಟು ಸಂಖ್ಯೆ | 594 |
| 7. | ಪರಿಷ್ಕರಣಕ್ಕೆ ಅರ್ಜಿ ಸಲ್ಲಿಸಲು ಈ ಕಛೇರಿಯಿಂದ ಶಿಫಾರಸ್ಸು ಮಾಡಿದ ಕ್ರಿಮಿನಲ್ ಪ್ರಕರಣಗಳ ಒಟ್ಟು ಸಂಖ್ಯೆ: | 120 |
| 8. | ಮೇಲ್ಮನವಿಯನ್ನು ಸಲ್ಲಿಸುವುದಕ್ಕಾಗಲಿ ಅಥವಾ ಪರಿಷ್ಕರಣಕ್ಕೆ ಅರ್ಜಿ ಸಲ್ಲಿಸುವುದಕ್ಕಾಗಲಿ ಶಿಫಾರಸ್ಸು ಮಾಡಿಲ್ಲದ ಕ್ರಿಮಿನಲ್ ಪ್ರಕರಣಗಳ ಒಟ್ಟು ಸಂಖ್ಯೆ | 10031 |

| | | |
|---|---|---|
| 9. | ಮೇಲ್ಮನವಿಯನ್ನು ಸಲ್ಲಿಸುವುದಕ್ಕಾಗಲಿ ಅಥವಾ ಪರಿಷ್ಕರಣಕ್ಕೆ ಅರ್ಜಿ ಸಲ್ಲಿಸುವುದಕ್ಕಾಗಲಿ ಶಿಫಾರಸ್ಸು ಮಾಡದೇ ಮುಖ್ಯ ಕಛೇರಿಯಲ್ಲಿ ಮುಕ್ತಾಯಗೊಳಿಸಲಾದ ಕ್ರಿಮಿನಲ್ ಪ್ರಕರಣಗಳ ಒಟ್ಟು ಸಂಖ್ಯೆ | 8827 |

**6] ಸರ್ಕಾರಿ ವ್ಯಾಜ್ಯಗಳು (ಸಿವಿಲ್):-**

ದಿನಾಂಕ: 01.01.2019 ರಿಂದ 31.12.2019ರ ಅವಧಿಯಲ್ಲಿ ಸಿವಿಲ್ ಜಡ್ಜ್ [ಕಿರಿಯ ಶ್ರೇಣಿ] ನ್ಯಾಯಾಲಯಗಳು ಮತ್ತು ಸಂಯುಕ್ತ ನ್ಯಾಯಾಲಯಗಳು ಹೊರಡಿಸಿರುವ ಸಿವಿಲ್ ಮೊಕದ್ದಮೆಗಳ ತೀರ್ಪುಗಳು ಮತ್ತು ಆದೇಶಗಳನ್ನು ಈ ಕಛೇರಿಯಲ್ಲಿ ಪರಿಶೀಲಿಸಿದ್ದು, ಪರಿಶೀಲಿಸಿದ ಬಗ್ಗೆ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| 1. | ದಿನಾಂಕ: 01.01.2019 ರಿಂದ 31.12.2019ರ ಅವಧಿಯಲ್ಲಿ ಪರಿಶೀಲಿಸಲಾದ ಸಿವಿಲ್ ಪ್ರಕರಣಗಳ ಒಟ್ಟು ಸಂಖ್ಯೆ | 1117 |
| 2. | ಮೇಲ್ಮನವಿಯನ್ನು ಸಲ್ಲಿಸಲು ಶಿಫಾರಸ್ಸು ಮಾಡಿರುವ ಸಿವಿಲ್ ಪ್ರಕರಣಗಳ ಒಟ್ಟು ಸಂಖ್ಯೆ | 91 |
| 3. | ಪರಿಷ್ಕರಣೆಗೆ ಅರ್ಜಿ ಸಲ್ಲಿಸಲು ಶಿಫಾರಸ್ಸು ಮಾಡಿದ ಸಿವಿಲ್ ಪ್ರಕರಣಗಳ ಒಟ್ಟು ಸಂಖ್ಯೆ | 04 |
| 4. | ಮೇಲ್ಮನವಿಯನ್ನು ಸಲ್ಲಿಸುವುದಕ್ಕಾಗಲಿ ಅಥವಾ ಪರಿಷ್ಕರಣಕ್ಕೆ ಅರ್ಜಿಯನ್ನು ಸಲ್ಲಿಸುವುದಕ್ಕಾಗಲಿ ಶಿಫಾರಸ್ಸು ಮಾಡಿಲ್ಲದ ಸಿವಿಲ್ ಪ್ರಕರಣಗಳ ಒಟ್ಟು ಸಂಖ್ಯೆ | 1022 |
| 5. | ವರದಿಯ ವರ್ಷದಲ್ಲಿ ವಜಾಗೊಂಡ ದಾವೆಗಳ ಒಟ್ಟು ಸಂಖ್ಯೆ | 652 |
| 6. | ಸಿವಿಲ್ ದಾವೆಗಳಿಗೆ ಸಂಬಂಧಿಸಿದಂತೆ ಪರಿಶೀಲಿಸಲಾದ ಒಟ್ಟು ಲಿಖಿತ ಹೇಳಿಕೆಗಳು | 631 |
| 7. | ಸಿವಿಲ್ ದಾವೆಗಳಿಗೆ ಸಂಬಂಧಿಸಿದಂತೆ ಸರ್ಕಾರದೊಂದಿಗೆ ಮತ್ತು ಸರ್ಕಾರದ ಅಧಿಕಾರಿಗಳೊಂದಿಗೆ ಮಾಡಿದ ಒಟ್ಟು ಪತ್ರ ವ್ಯವಹಾರಗಳು | 2596 |

**7. ಆಡಳಿತ:-**

**ವರದಿಯ ವರ್ಷದಲ್ಲಿ ಹೊಸದಾಗಿ ಸೃಜನೆಯಾದ ಕಛೇರಿ ಮತ್ತು ಹುದ್ದೆಗಳ ವಿವರ**

| ಕ್ರ. ಸಂ. | ಕಛೇರಿ ಹೆಸರು ಮತ್ತು ಸ್ಥಳ | ಹುದ್ದೆಗಳ ವಿವರಗಳು | ಸರ್ಕಾರದ ಆದೇಶ ಸಂಖ್ಯೆ/ದಿನಾಂಕ | ಷರಾ |
|---|---|---|---|---|
| - ವರದಿಯ ವರ್ಷದಲ್ಲಿ ಹೊಸದಾಗಿ ಯಾವುದೇ ಕಛೇರಿ ಮತ್ತು ಹುದ್ದೆಗಳು ಸೃಜನೆಯಾಗಿರುವುದಿಲ್ಲ- | | | | |

**8] 2019-20ನೇ ಸಾಲಿನ ವರ್ಗಾವಣೆ ವಿವರಗಳು:-**

| ಕ್ರಸಂ | ಸಮೂಹ | ಪದನಾಮ | ವರ್ಗಾವಣೆಯಾದ ಅಧಿಕಾರಿ/ ನೌಕರರ ಸಂಖ್ಯೆ | ಷರಾ |
|---|---|---|---|---|
| 1. | `ಎ` | ಸರ್ಕಾರಿ ಅಭಿಯೋಜಕರು/ಕಾನೂನು ಅಧಿಕಾರಿ[ಹಿರಿಯ] | 16 | - |
| | | ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು/ ಕಾನೂನು ಅಧಿಕಾರಿ [ಕಿರಿಯ] | 03 | - |
| 2. | `ಬಿ` | ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರು | 03 | |
| | | ಆಡಳಿತಾಧಿಕಾರಿ | - | - |
| 3. | "ಸಿ" | ಅಧೀಕ್ಷಕರು | 03 | - |
| 4. | "ಸಿ" | ಪ್ರಥಮ ದರ್ಜೆ ಸಹಾಯಕರು | 02 | - |
| 5. | "ಸಿ" | ಶೀಘ್ರಲಿಪಿಗಾರರು | 01 | - |
| 6. | "ಸಿ" | ಬೆರಳಚ್ಚುಗಾರರು | 02 | - |

**9) ವರದಿಯ ವರ್ಷದಲ್ಲಿ ಮುಂಬಡ್ತಿಯ ವಿವರಗಳು**

| ಕ್ರ.ಸಂ. | ಸಮೂಹ | ಹುದ್ದೆಯ ಹೆಸರು | ಬಡ್ತಿ ಹೊಂದಿದ ಹುದ್ದೆಯ ಹೆಸರು | ಬಡ್ತಿ ಹೊಂದಿದ ಅಧಿಕಾರಿ/ನೌಕರರ ಸಂಖ್ಯೆ |
|---|---|---|---|---|
| 1. | `ಎ` | ಸರ್ಕಾರಿ ಅಭಿಯೋಜರು | ಅಭಿಯೋಗ ಉಪ ನಿರ್ದೇಶಕರು | 02 |
| 2. | `ಎ` | ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು/ಕಾನೂನು ಅಧಿಕಾರಿ [ಕಿರಿಯ] | ಸರ್ಕಾರಿ ಅಭಿಯೋಜಕರು/ ಕಾನೂನು ಅಧಿಕಾರಿ [ಹಿರಿಯ] | 10 |
| 3. | `ಬಿ` | ಸಹಾಯಕ ಸರ್ಕಾರಿ ಅಭಿಯೋಜಕರು -ವ-ಸಹಾಯಕ ಸರ್ಕಾರಿ ವಕೀಲರು | ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು/ಕಾನೂನು ಅಧಿಕಾರಿ [ಕಿರಿಯ] | 17 |
| 4. | `ಬಿ` | ಆಡಳಿತಾಧಿಕಾರಿ | ಕೇಂದ್ರ ಸ್ಥಾನಿಕ ಸಹಾಯಕರು | - |
| 5. | `ಸಿ` | ಅಧೀಕ್ಷಕರು | ಆಡಳಿತಾಧಿಕಾರಿ | - |
| | | ಶೀಘ್ರಲಿಪಿಗಾರರು/ಹಿರಿಯ ಬೆರಳಚ್ಚುಗಾರರ ವೃಂದದಿಂದ | ಅಧೀಕ್ಷಕರು | 02 |

| | | | | |
|---|---|---|---|---|
| | | ಹಿರಿಯ ಬೆರಳಚ್ಚುಗಾರರ ವೃಂದದಿಂದ | ಅಧೀಕ್ಷಕರ ಹುದ್ದೆಗೆ | 01 |
| 6. | `ಡಿ` | ಗ್ರೂಪ್ `ಡಿ` ವೃಂದದಿಂದ | ದ್ವಿತೀಯ ದರ್ಜೆ ಸಹಾಯಕರು | - |
| 7. | | ದಲಾಯತ್ ವೃಂದದಿಂದ | ಅಟೆಂಡರ್ | - |

10] ವರದಿಯ ವರ್ಷದಲ್ಲಿ ನೇಮಕಾತಿಯ ವಿವರಗಳು:-

| ಕ್ರಮ ಸಂಖ್ಯೆ | ಭರ್ತಿ ಮಾಡಲಾದ ಹುದ್ದೆಯ ವಿವರ | ಭರ್ತಿ ಮಾಡಲಾದ ಹುದ್ದೆಗಳ ಸಂಖ್ಯೆ | | ಷರಾ |
|---|---|---|---|---|
| | | ಕೆ.ಪಿ.ಎಸ್.ಸಿ. ಮೂಲಕ | ಅನುಕಂಪದ ಆದಾರದ ಮೇಲೆ | |
| 1. | ಪ್ರಥಮ ದರ್ಜೆ ಸಹಾಯಕರು | - | 02 | - |
| 2. | ದ್ವಿತೀಯ ದರ್ಜೆ ಸಹಾಯಕರು | - | 02 | - |

11) ಬಾಹ್ಯಮೂಲ ಅಭ್ಯರ್ಥಿಗಳ ವೃಂದ ಬಲ :

| ಕ್ರ.ಸಂ. | ಹುದ್ದೆಗಳ ವಿವರ | ಮಂಜೂರಾಗಿರುವ ಹುದ್ದೆಗಳ ಸಂಖ್ಯೆ | ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|---|
| 01 | ಶೀಘ್ರಲಿಪಿಗಾರರು | 42 | 42 | - |
| 02 | ಬೆರಳಚ್ಚುಗಾರರು | 244 | 244 | - |
| 03 | ದಲಾಯತ್ | 333 | 333 | - |
| 04 | ವಾಹನ ಚಾಲಕರು | 07 | 07 | - |
| | ಒಟ್ಟು | 626 | 626 | - |

12] ಶಿಕ್ಷೆಯಾದ ಪ್ರಕರಣಗಳ ವಿವರ.

| ಕ್ರಮ ಸಂಖ್ಯೆ | ಪ್ರಕರಣಗಳ ವರ್ಗ | ಶಿಕ್ಷೆಯಾದ ಪ್ರಕರಣಗಳ ಸಂಖ್ಯೆ | ಷರಾ |
|---|---|---|---|
| 01 | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೇಲೆ ದೌರ್ಜನ್ಯ ಎಸಗಿದ ಪ್ರಕರಣಗಳು | 69 | 6% |
| 02 | ಪೋಕ್ಸೋ ಪ್ರಕರಣಗಳು | 180 | 11% |

**13] ಕರ್ತವ್ಯ ನಿರತ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆದ ಲೈಂಗಿಕ ದೌರ್ಜನ್ಯ ಪ್ರಕರಣಗಳ ವಿವರ**

ಈ ಇಲಾಖೆಯಲ್ಲಿ ಕರ್ತವ್ಯ ನಿರತ ಸ್ಥಳಗಳಲ್ಲಿ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆದ ಬಗ್ಗೆ ಯಾವುದೇ ಪ್ರಕರಣಗಳು ದಾಖಾಲಗಿರುವುದಿಲ್ಲ.

**14] ಮಾಹಿತಿ ಹಕ್ಕು ಅಧಿನಿಯಮ,2005ರ ಅಡಿ ಸ್ವೀಕೃತವಾದ ಅರ್ಜಿಗಳ ಮತ್ತು ಮೇಲ್ಮನವಿ ಅರ್ಜಿಗಳ ವಿವರ.**

| ಮಾಹಿತಿ ಕೋರಿ ಸಲ್ಲಿಸಿದ ಅರ್ಜಿಗಳು | | | ಮೇಲ್ಮನವಿ ಅರ್ಜಿಗಳು | | | ಷರಾ |
|---|---|---|---|---|---|---|
| ಸ್ವೀಕೃತಿ | ವಿಲೇವಾರಿ | ಬಾಕಿ | ಸ್ವೀಕೃತಿ | ವಿಲೇವಾರಿ | ಬಾಕಿ | - |
| 94 | 86 | 08 | 05 | 05 | - | - |

ದಿನಾಂಕ:12.03.2020

ಸ್ಥಳ : ಬೆಂಗಳೂರು

(ಹೆಚ್.ಕೆ.ಜಗದೀಶ್)
ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ
ನಿರ್ದೇಶಕರು(ಪ್ರ), ಬೆಂಗಳೂರು

# ಕರ್ನಾಟಕ ಸರ್ಕಾರ

## ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ
## ಬೆಂಗಳೂರು

# 2020–2021 ನೇ ಸಾಲಿನ
# ನಿರ್ವಹಣಾ ಮುಂಗಡದ ವಿವರಗಳು

**ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಗೆ ಸಂಬಂಧಿಸಿದ 2020–21ನೇ ಸಾಲಿನ ನಿರ್ವಹಣಾ ಮುಂಗಡದ ವಿವರಗಳು**

1) **2019–20 ನೇ ಸಾಲಿನ ಆಯವ್ಯಯ ನಿರ್ವಹಣಾ ಮುಂಗಡದ ವಿವರಗಳು:–**

ಈ ಇಲಾಖೆಯಲ್ಲಿ ಯಾವುದೇ ಯೋಜನೆಗಳು ಇರುವುದಿಲ್ಲ. ಅಧಿಕಾರಿಗಳ ಸಿಬ್ಬಂದಿವರ್ಗದವರ ವೇತನ ಮತ್ತು ಭತ್ಯೆ ಹಾಗೂ ಕಛೇರಿ ನಿರ್ವಹಣಾ ವೆಚ್ಚ ಮತ್ತು ಇತರೆ ವೆಚ್ಚಗಳನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆಯಿಂದ ಭರಿಸಲಾಗುತ್ತಿದೆ.

2014 – ನ್ಯಾಯಪರಿಪಾಲನೆ

114 – ಕಾನೂನು ಸಲಹೆಗಾರರು ಹಾಗೂ ಸಮೂಪದೇಶಕರು.

02 – ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರು.

**ಯೋಜನೇತರ**

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ 2014–114–0–02 | 2019–20 ನೇ ಸಾಲಿನ ಆಯವ್ಯಯದಲ್ಲಿ ಮಾಡಿರುವ ಅವಕಾಶ (ಲಕ್ಷ ರೂ ಗಳಲ್ಲಿ) | 2019–20 ರ ಸಾಲಿನಲ್ಲಿ ವೆಚ್ಚ ಮಾಡಿದ ಮೊತ್ತ (ರೂಗಳಲ್ಲಿ) ದಿ:12:03.2020 ರವರೆಗೆ |
|---|---|---|---|
| 01 | 02 | 03 | 04 |
| 1 | 002– ಅಧಿಕಾರಿಗಳ ವೇತನ | 3119.00 | 30,23,12,477 |
| 2 | 003– ಸಿಬ್ಬಂದಿ ವೇತನ | 1799.29 | 17,86,78,122 |
| 3 | 011– ತುಟ್ಟಿಭತ್ಯೆ | 523.00 | 4,79,85,323 |
| 4 | 014– ಇತರೇ ಭತ್ಯೆ | 1287.00 | 12,90,41,434 |
| 5 | 020– ವೈದ್ಯಕೀಯ ಭತ್ಯೆ | 11.76 | 11,10,170 |
| 6 | 021– ವೈದ್ಯಕೀಯ ವೆಚ್ಚ ಮರು ಪಾವತಿ | 60.00 | 50,65,250 |
| 7 | 034–ಗುತ್ತಿಗೆ/ಹೊರಗುತ್ತಿಗೆ | 1400.00 | 13,56,42,595 |
| 8 | 041– ಪ್ರಯಾಣ ವೆಚ್ಚಗಳು | 47.00 | 35,66,290 |

| | | | |
|---|---|---|---|
| 9 | 051– ಸಾಮಾನ್ಯ ವೆಚ್ಚಗಳು | 100.00 | 30,23,546 |
| 10 | 052– ದೂರವಾಣಿ ವೆಚ್ಚಗಳು | 50.00 | 17,37,843 |
| 11 | 053– ಕಚೇರಿ ಪೀಠೋಪಕರಣಗಳು ಮತ್ತು ಜೋಡಣೆಗಳ ಖರೀದಿ | 100.00 | 68,00,000 |
| 12 | 059– ಇತರ ಖರ್ಚು | 71.00 | – |
| 13 | 071– ಕಟ್ಟಡ ವೆಚ್ಚಗಳು | 106.00 | 66,83,247 |
| 14 | 103– ಸಹಾಯಾನುದಾನ (ಸಾಮಾನ್ಯ) | 7.00 | 7,00,000 |
| 15 | 180– ಯಂತ್ರೋಪಕರಣಗಳು ಮತ್ತು ಸಾಧನ ಸಾಮಗ್ರಿಗಳು | 2.00 | – |
| 16 | 195– ಸಾರಿಗೆ ವೆಚ್ಚಗಳು | 17.00 | 7,22,742 |
| | ಒಟ್ಟು | 8700.13 | 81,94,81,561 |

**2020–21 ನೇ ಸಾಲಿನ ಆಯವ್ಯಯಗಳ ವಿವರಗಳು**

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ 2014–114–0–02 | 2020–21 ನೇ ಸಾಲಿನ ಆಯವ್ಯಯದಲ್ಲಿ ಮಾಡಿರುವ ಅವಕಾಶ (ಲಕ್ಷ ರೂ.ಗಳಲ್ಲಿ) |
|---|---|---|
| 1 | 002– ಅಧಿಕಾರಿಗಳ ವೇತನ | 3035.00 |
| 2 | 003– ಸಿಬ್ಬಂದಿ ವೇತನ | 1522.00 |
| 3 | 011– ತುಟ್ಟಿಭತ್ಯೆ | 1094.00 |
| 4 | 014– ಇತರೇ ಭತ್ಯೆ | 1211.00 |
| 5 | 020– ವೈದ್ಯಕೀಯ ಭತ್ಯೆ | 7.00 |
| 6 | 021– ವೈದ್ಯಕೀಯ ವೆಚ್ಚ ಮರು ಪಾವತಿ | 57.00 |
| 7 | 034–ಗುತ್ತಿಗೆ/ಹೊರಗುತ್ತಿಗೆ | 2558.00 |
| 8 | 041– ಪ್ರಯಾಣ ವೆಚ್ಚಗಳು | 30.00 |
| 9 | 051– ಸಾಮಾನ್ಯ ವೆಚ್ಚಗಳು | 204.00 |
| 10 | 052– ದೂರವಾಣಿ ವೆಚ್ಚಗಳು | 7.00 |
| 11 | 053– ಕಚೇರಿ ಪೀಠೋಪಕರಣಗಳು ಖರೀದಿ | 100.00 |
| 12 | 071– ಕಟ್ಟಡ ವೆಚ್ಚಗಳು | 110.00 |
| 13 | 103– ಸಹಾಯ ಅನುದಾನ (ಸಾಮಾನ್ಯ) | 8.00 |
| 14 | 180– ಯಂತ್ರೋಪಕರಣ ಮತ್ತು ಸಾಧನ ಸಾಮಗ್ರಿಗಳು. | 1.00 |
| 15 | 195– ಸಾರಿಗೆ ವೆಚ್ಚಗಳು | 17.00 |
| | **ಒಟ್ಟು** | **9961.00** |

ಸ್ಥಳ : ಬೆಂಗಳೂರು
ದಿನಾಂಕ : 12.03.2020.

(ಹೆಚ್.ಕೆ.ಜಗದೀಶ್)
ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ
ನಿರ್ದೇಶಕರು (ಪ್ರ),
ಬೆಂಗಳೂರು, ದೂ:22213856.